SC No.26/2022
CW-08 / PW-08

**ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು**

**ಸತ್ರ ಮೊಕದ್ದಮೆ ಸಂಖ್ಯೆ 26/2022**

ಚಾ.ಸಾಃ 08 ಪ್ರಾ.ಸಾಃ 08

ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ 23.02.2026

| | | |
|---|---|---|
| ಸಾಕ್ಷಿಯ ಹೆಸರು | : | ಸಣ್ಣಈರೇಶ |
| ತಂದೆಯ ಹೆಸರು | : | ಚಂದಪ್ಪ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಪಿ.ಎಸ್.ಐ ರಾಯಚೂರು ಸಂಚಾರ ಪಿ.ಎಸ್ |
| ವಿಳಾಸ | : | ರಾಯಚೂರು |

**ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದಃ**

ನಾನು ಗಬ್ಬೂರು ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐ ಎಂದು ಕರ್ತವ್ಯ ನಿರ್ವಹಿಸುತ್ತಿರುವಾಗ ದಿನಾಂಕ 13.07.2021 ರಂದು ನಾನು, ಚಾಸಾ-9, 10 ಗಸ್ತು ಕರ್ತವ್ಯದಲ್ಲಿ ಇದ್ದಾಗ ಗಲಾಟೆಯಾಗುವ ಮಾಹಿತಿ ಬಂದ ಕೂಡಲೇ ಹಿರೇರಾಯಕುಂಪಿ ಗ್ರಾಮಕ್ಕೆ ಹೋದೆವು. ಅಲ್ಲಿ ಜನ ಸೇರಿದ್ದರು. ಚಾಸಾ-1 ರವರು ಇದ್ದರು. ಕಳ್ಳತನ ಪ್ರಕರಣದಲ್ಲಿ ಅನುಮಾನಸ್ಪದ ವ್ಯಕ್ತಿಯನ್ನು ಕರೆದುಕೊಂಡು ಹೋಗಲು ಬಂದಾಗ ಗ್ರಾಮಸ್ಥರು ಚಾಸಾ-1 ಮತ್ತು ಸಿಬ್ಬಂದಿ ಮೇಲೆ ಹಲ್ಲೆ ಮಾಡಿ, ಅವಾಚ್ಯಶಬ್ದಗಳಿಂದ ಬೈದು ದೂಕ್ಕಾಡಿರುವುದಾಗಿ ಚಾಸಾ-1 ಹೇಳಿದರು. ನಾವು ಜನರನ್ನು ಚದುರಿಸಿದೆವು. ಚಾಸಾ-1 ಮತ್ತು ಸಿಬ್ಬಂದಿಯು ಮರಳಿ ಪೋಲಿಸ್ ಠಾಣೆಗೆ ಹೋದರು. ಎಂ.ಎಲ್.ಸಿ ಮಾಹಿತಿ ಬಂದಿತು. ಹೆಚ್.ಸಿ ಬಂದಯ್ಯ ಇವರನ್ನು ಆಸ್ಪತ್ರೆಗೆ ಕಳುಹಿಸಿದೆನು. ಅವರು ಎಂ.ಎಲ್.ಸಿ ಪಡೆದು ಹಾಜರು ಪಡಿಸಿದರು. ಚಾಸಾ-17 ರವರು ಮೊಕದ್ದಮೆ ದಾಖಲಿಸಿರುತ್ತಾರೆ.

02. ದಿನಾಂಕ 16.07.2021 ರಂದು ಚಾಸಾ-18 ರವರ ಆದೇಶದ ಮೇರೆಗೆ ಸಿಬ್ಬಂದಿ ಸಹಾಯದಿಂದ ಆರೋಪಿತರನ್ನು ಚಾಸಾ-18 ರವರ ಮುಂದೆ ಹಾಜರು ಪಡಿಸಿರುತ್ತೇನೆ.

03. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದಲ್ಲಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

**ಆರೋಪಿತರ ಪರ ಶ್ರೀ ಎಸ್.ವಾಯ್ ವಕೀಲರಿಂದ ಪಾಟೀ ಸವಾಲುಃ-**

04. ನಮ್ಮ ಠಾಣೆಗೆ ಚಾಸಾ-1 ರವರಿಂದ ಅನುಮಾನಸ್ಪದ ವ್ಯಕ್ತಿಯ ಬಗ್ಗೆ ಯಾವುದೇ ಮಾಹಿತಿ ಬಂದಿರಲಿಲ್ಲ. ಹೊನ್ನಯ್ಯ ಎಂಬ ವ್ಯಕ್ತಿಯನ್ನು ವಶಕ್ಕೆ ಪಡೆದ ನಂತರ ಚಾಸಾ-1 ರವರು ನಮ್ಮ ಠಾಣೆಗೆ ಮಾಹಿತಿ ಕೊಟ್ಟಿರಲಿಲ್ಲ. ಠಾಣೆಯ ವ್ಯಾಪ್ತಿ ಹೊರಗಡೆ ವ್ಯಕ್ತಿಯನ್ನು ದಸ್ತಗಿರಿ ಮಾಡಿದಾಗ ಮೇಲಾಧಿಕಾರಿಗಳ ಪರವಾನಿಗೆ ಕಡ್ಡಾಯ ಮತ್ತು ಸ್ಥಳೀಯ ಪೋಲಿಸ್ ಠಾಣೆಗೆ ಮಾಹಿತಿ ಕೊಡುವುದು ಕಡ್ಡಾಯ ಎನ್ನುವುದು ಇರಬಹುದು. ಈ ಪ್ರಕರಣದಲ್ಲಿ ಅಂತಹ ಯಾವುದೇ ನಿಯಮಗಳನ್ನು ಪಾಲಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಹೊನ್ನಯ್ಯ ಈತನನ್ನು ವಶಕ್ಕೆ ಪಡೆದ ಬಗ್ಗೆ ಸಂಬಂಧಿಕರಿಗೆ ತಿಳಿಯಿಸಿದ ಬಗ್ಗೆ ಚಾಸಾ-1 ನನಗೆ ಯಾವುದೇ ಮಾಹಿತಿ ಕೊಟ್ಟಿಲ್ಲ. ಚಾಸಾ-1 ಮತ್ತು ಸಿಬ್ಬಂದಿ ಮಪ್ತಿಯಲ್ಲಿ ಇದ್ದರು ಅಂದರೆ ಯುನಿಫಾರ್ಮ್ ಧರಿಸಿರಲಿಲ್ಲ. ನನಗೆ ಮಾಹಿತಿ ಬಂದಾಗ ನಾನು ಗೂಗಲ್ ನಲ್ಲಿ ಇದ್ದೆನು. ಗೂಗಲ್ ನಿಂದ ಗುನ್ನಾ ಸ್ಥಳಕ್ಕೆ ನಾಲ್ಕು ಕಿ.ಮಿ ದೂರ ಇದೆ. ನನಗೆ ಮಾಹಿತಿ ಬಂದಾಗ ಸಂಜೆ 07.00 ಗಂಟೆ ಸಮಯವಾಗಿತ್ತು. ನಾವು ಗುನ್ನೆ ಸ್ಥಳಕ್ಕೆ ಹೋದಾಗ 07.15 ರ ಸಮಯವಾಗಿತ್ತು. ನಾವು ಸ್ಥಳಕ್ಕೆ ಹೋದಾಗ ವಶಕ್ಕೆ ಪಡೆದಂತಹ ವ್ಯಕ್ತಿ ಹೊನ್ನಯ್ಯ ಸ್ಥಳದಲ್ಲಿ ಇದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ನಾವು ಸ್ಥಳಕ್ಕೆ ಹೋದಾಗ ಅಲ್ಲಿ 100 ರಿಂದ 150 ಜನರು ಸೇರಿದ್ದರು, ಅವರನ್ನು ಗುರುತಿಸಲು ಆಗುವುದಿಲ್ಲ, ಅವರು ಯಾವ ಊರಿನವರು ಎಂದು

ಹೇಳಲಾಗುವುದಿಲ್ಲ. ಗುನ್ನೆ ಸ್ಥಳದಲ್ಲಿ ನಾವು ಒಂದು ತಾಸಿಗೂ ಹೆಚ್ಚಿನ ಸಮಯ ಇದ್ದೆವು.

05. ಗುನ್ನೆ ಸ್ಥಳದಿಂದ ವಡಗೇರ ಗ್ರಾಮ 20 ರಿಂದ 25 ಕಿ.ಮಿ ದೂರ ಇದೆ. ಗುನ್ನೆ ಸ್ಥಳದಿಂದ ಅವರು ಹೋದಾಗ 08.30 ಅಥವಾ 09.00 ಗಂಟೆಯಾಗಿತ್ತು.

06. ಯಾರು ಹಲ್ಲೆ ಮಾಡಿದರು ಎಂದು ನನಗೆ ವಯಕ್ತಿಕವಾಗಿ ಮಾಹಿತಿ ಇಲ್ಲ. ಹಲ್ಲೆಯ ಘಟನೆ ನಾನು ಹೋಗುವ ಮೊದಲೇ ನಡೆದಿತ್ತು. ಹಲ್ಲೆಯಾಗುವುದನ್ನು ನಾನು ನೋಡಿಲ್ಲ.

07. ಚಾಸಾ-1 ರವರ ಜೊತೆ ನಾಲ್ಕು-ಐದು ಜನ ಸಿಬ್ಬಂದಿ ಇದ್ದರು. ಚಾಸಾ-1 ಮತ್ತು ಅವರ ಸಿಬ್ಬಂದಿಗೆ ಗಾಯಗಳು ಆಗಿದ್ದವು, ಯಾರಿಗೆ ಯಾವ ಗಾಯ ಆಗಿತ್ತು ಎಂದು ಹೇಳಲಾಗುವುದಿಲ್ಲ. ಚಾಸಾ-1 ರವರಿಗೆ ಮುಖದ ಮೇಲೆ ಸ್ವಲ್ಪ ಗಾಯವಾಗಿತ್ತು ಮತ್ತು ಒಳಪೆಟ್ಟು ಆಗಿರುತ್ತವೆ ಎಂದು ಹೇಳಿದರು. ಈ ವಿವರಗಳನ್ನು ತನಿಖಾಧಿಕಾರಿಗೆ ನಾನು ಹೇಳಿದ್ದೇನೆ.

08. ಚಾಸಾ-1 ಮತ್ತು ಅವರ ಸಿಬ್ಬಂದಿ ಬುಲೇರೋ ವಾಹನ ತೆಗೆದುಕೊಂಡು ಬಂದಿದ್ದರು, ಅದರ ನಂಬರ್ ಗೊತ್ತಿಲ್ಲ, ಅದರ ಚಾಲಕ ಯಾರು ಗೊತ್ತಿಲ್ಲ. ನಮ್ಮ ಠಾಣೆಗೆ ಸಂಬಂಧಪಟ್ಟ ಡಿ.ವಾಯ್.ಎಸ್.ಪಿ ಅಥವಾ ಚಾಸಾ-1 ರವರ ಠಾಣೆಗೆ ಸಂಬಂಧಪಟ್ಟ ಡಿ.ವಾಯ್.ಎಸ್.ಪಿ ನಾವು ಸ್ಥಳಕ್ಕೆ ಹೋದಾಗ ಗುನ್ನೆ ಸ್ಥಳಕ್ಕೆ ಬಂದಿಲ್ಲ. ಚಾಸಾ-1 ಮತ್ತು ಸಿಬ್ಬಂದಿ ವಡಗೇರಗೆ ಹೋದ ಮೇಲೆ ನಾವು ಸ್ಥಳದಿಂದ ಹೊರಟುಬಂದೆವು. ಈ ಪ್ರಕರಣದ ಮಾಹಿತಿ ಬಂದ ಬಗ್ಗೆ ನಮ್ಮ ಠಾಣೆಯ ಎಸ್.ಹೆಚ್.ಡಿಯಲ್ಲಿ ನಮೂದು ಮಾಡಲಾಗಿದೆ ಮತ್ತು ಮೇಲಾಧಿಕಾರಿಗಳಿಗೆ ಸದರಿ ವಿಷಯ ತಿಳಿಸಲಾಗಿದೆ.

09. ನನಗೆ ಮಾಹಿತಿ ಬಂದ ಫೋನ್ ನಂಬರ್ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ಕಂಟ್ರೋಲ್ ರೂಮ್ ನಿಂದ ಮಾಹಿತಿ ಬಂದಿದೆ. ಕಂಟ್ರೋಲ್ ರೂಮ್ ನಿಂದ ಮಾಹಿತಿ ಬಂದ ಬಗ್ಗೆ ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎನ್ನುವುದು ನಿಜ.

10. ನಾನು ಮತ್ತು ನಮ್ಮ ಸಿಬ್ಬಂದಿ ಗುನ್ಹೆ ಸ್ಥಳಕ್ಕೆ ಹೋಗಿಲ್ಲ ಎನ್ನುವುದು ಸುಳ್ಳು. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎನ್ನುವುದು ಸುಳ್ಳು. ಘಟನೆ ನಡೆದ ಸಮಯವನ್ನು ನನ್ನ ಹೇಳಿಕೆಯಲ್ಲಿ ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

**(ಹತ್ತಿಕಾಳ ಪ್ರಭು ಸಿದ್ದಪ್ಪ)**
ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.